This question paper consists of 31 questions and 8 printed pages.

Roll No.
ರೋಲ್ ನಂ.

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |

Code No. 53/S/O/K

Set - A

# KANNADA

## ಕನ್ನಡ

## (208)

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ____________________

Signature of Invigilators
ಉಸ್ತು ವಾರಿದಾರರ ರುಜು

1. ____________________

2. ____________________

### ಸಾಮಾನ್ಯ ಸೂಚನೆಗಳು ಃ

1 ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2 ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದೂ ಪರೀಕ್ಷಿಸಿ.

3 ವಸ್ತು ನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

4 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

6 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **53/S/O/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.

# KANNADA

## ಕನ್ನಡ

## (208)

ಸಮಯ : **3** ಗಂಟೆಗಳು ] [ಗರಿಷ್ಠ ಅಂಕ : **100**

ಸೂಚನೆಗಳು ಃ **(1)** ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರಪುಸ್ತಕದಲ್ಲೆ ಬರೆಯಿರಿ.

**(2)** ಪ್ರಶ್ನೇಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

**(3)** ಪ್ರಶ್ನಸಂಖ್ಯೆ **1** ರೀಂದ **11** ರ ವರೆಗೆ **4** ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

---

**1** ಹುಯೇನ್ ಸ್ಯಾಂಗನು ತೀರಿಹೋದ ವರ್ಷ .............. **1**

(A) ಕ್ರಿ.ಶ. 664 (B) ಕ್ರಿ.ಶ. 667

(C) ಕ್ರಿ.ಶ. 864 (D) ಕ್ರಿ.ಶ. 764

**2** ಸವಿತಾ ನಾಗಭೂಷಣ ಅವರ ಜಿಲ್ಲೆ ............... **1**

(A) ಬೆಂಗಳೂರು (B) ಮಂಗಳೂರು

(C) ಚಿಕ್ಕಮಂಗಳೂರು (D) ಹಾಸನ

**3** ಅಶೋಕವನದಲ್ಲಿ ಇರುವ ದೇವಾಲಯ .................. **1**

(A) ಮಹಾಕಾಳಿ (B) ಭದ್ರಕಾಳಿ

(C) ದುರ್ಗಾ (D) ದ್ಯಾಮವ್ವ

**4** ಮರಿದುಂಬಿಯಾಗಿ ಹುಟ್ಟಬೇಕು ಎಂದು - ಹೇಳಿದನು. **1**

(A) ರನ್ನ (B) ಪೊನ್ನ

(C) ಪಂಪ (D) ಜನ್ನ

**5** ಜಾತ್ರೆಯಲ್ಲಿ ನೆರೆದರೆ ಈ ರೋಗ ಬರುತ್ತದೆ **1**

(A) ಸಿಡುಬು (B) ಮೈಲಿ

(C) ಕಾಲರಾ (D) ಫ್ಲೇಗ್

**6** ಮತದ ಬಿರುಕುಗಳನು ............... **1**

(A) ಮರೆವೆ (B) ತೊರೆವೆ

(C) ಬಿರಿವೆ (D) ಕರೆವೆ

7 ಓಟುರುಕ ಎಂದರೆ ............... 1

(A) ನಾಯಿ (B) ಕೋತಿ

(C) ಆಮೆ (D) ಹಾವು

8 ರಾಕ್ಷಸರಿಬ್ಬರೂ ಸತ್ತದ್ದು ಇದರ ಕತ್ತನ್ನು ಕತ್ತರಿಸಿದರಿಂದ. 1

(A) ಕೋಗಿಲೆ (B) ಗಿಳಿ

(C) ಪಾರಿವಾಳ (D) ಕಾಗೆ

9 ನಂಬಗೀನ ಸೋರಿದರ .................... ಇಲ್ಲಾ. 1

(A) ಛಲ (B) ಕಳೆ

(C) ಬಲ (D) ಸಂತೋಷ

10 'ಹೊಂಬಣ್ಣ' ಇದು ಈ ಸಮಾಸದ ನಿಯಮದಲ್ಲಿ ಬರುತ್ತದೆ. 1

(A) ದ್ವಿಗು (B) ಬಹುವ್ರೀಹಿ

(C) ಕರ್ಮಧಾರಯ (D) ಅಂಶಿ

11 ಪದೇಪದೇ ವೈದ್ಯರನ್ನು ಆಸ್ಪತ್ರೆಯನ್ನು ಬದಲಾಯಿಸುವುದು .................. 1

(A) ಉತ್ತಮ (B) ಕ್ಷೇಮದಲ್ಲಿ

(C) ಒಳ್ಳಯದು (D) ಆರೋಗ್ಯಕರ

12 ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ

ಅನೇಕ ಬಾರಿ ಹಲವರು ನಮ್ಮಲ್ಲಿ ನೈತೀಕ ಮಟ್ಟ ಇರದು ಬಹಳ ಕೆಳಮಟ್ಟಕ್ಕೆ ಇಳಿದಿದೆ ಎಂದು ಉದ್ಧಾರ ತೆಗೆಯುವುದುಂಟು. ಆದುಕೇಲಮಟ್ಟಿಗೆ ನಿಜವೂ ಹೌದು, ಆದರೆ ಅದಕ್ಕಿ ಕಾರಣಗಳಿಲ್ಲದೆ ಇಲ್ಲ ಇಂಥ ಕಾರಣಗಳಲ್ಲಿ ಮುಖ್ಯವಾಗಿ ನಮ್ಮ ಮೌಲ್ಯಗಳಲ್ಲಿಯ ಬದಲಾವಣೆ ಒಂದಾಗಿದೆ. ಈ ಬದಲಾವಣೆ ಕಾಲಾಂತರದಿಂದ ನಡೆದೇಇದೆ. ಇದಕ್ಕೇ ಇತಿಹಾಸವೇ ಸಾಕ್ಷಿಯಾಗಿದೆ. ಯಾವುದೇ ದೇಶದಲ್ಲಿ ಒಂದು ಕಾಲದಲ್ಲಿ ಸದ್ಗುಣಿಗೆ ಗೌರವ ಸಲ್ಲುತ್ತಿದ್ದರೆ ಮತ್ತೊಂದು ಕಾಲದಲ್ಲಿ ಯೋಧನಿಗೆ ಇನ್ನೊಂದು ಕಾಲದಲ್ಲಿ ಮೇಧಾವಿಗೆ, ಮಗದೊಂದು ಕಾಲದಲ್ಲಿ ಶ್ರಿಮಂತನಿಗೆ ಗೌರವ ಸಲ್ಲುತ್ತದೆ. ಈಗಿನ ಕಾಲದಲ್ಲಿ ಗೌರವವನ್ನು ಆತನ ಬ್ಯಾಂಕಿನಲ್ಲಿರುವ ಹಣ, ಅವನು ವಾಸಿಸುವ ಮನೆ, ಅವನು ಓಡಾಡುವ ವಾಹನ ಇವುಗಳ ಮೇಲೆ ನಿರ್ಣಯಿಸುವ ಪ್ರವೃತ್ತಿ ಸ್ವಾಭಾವಿಕವಾಗಿ ಹೆಚ್ಚಾಗಿದೆ. ಸಾಮಾನ್ಯ ಮನುಷ್ಯನು ಈ ಭೌತಿಕ ಸಾಧನಗಳೇ ಸುಖವನ್ನು ತರಬಲ್ಲವೆಂದು ನಂಬಿ ಅವುಗಳಿಗಾಗಿ ಹಾತೊರೆದು ಕೊನೆಗೆ ಅವುಗಳಿಂದ ಸುಖ ಉಂಟಾಗಲಾರದೆಂದು ಮನವರಿತು ನಿರಾಶನಾಗುತ್ತಾನೆ. ಹೀಗೆ ಸದ್ಗುಣಿಗೆ ಶ್ಲಾಘನೆ ಸಿಗದೆ ಜಗತ್ತಿನಲ್ಲಿ ಮನುಷ್ಯ ತನ್ನಲ್ಲದ್ದ ಮಾನವೀಯತೆಯನ್ನು ಕಳೆದುಕೊಳ್ಳುತ್ತಾನೆ.

ಪ್ರಶ್ನೇಗಳು :

(1) ಕೆಳಮಟ್ಟಕ್ಕೆ ಇಳಿದಿರುವುದು ............ 1

(A) ನೀರಿನಮಟ್ಟ (B) ನೈತ್ರಿಕಮಟ್ಟ

(C) ಗರಿಷ್ಟಮಟ್ಟ (D) ಕನಿಷ್ಟಮಟ್ಟ

(2) ಎಷ್ಟುಬಾರಿ ಉದ್ಧಾರ ತೆಗೆಯುವುದುಂಟು ? 1

(A) ಕೆಲವುಬಾರಿ (B) ಹಲವುಬಾರಿ

(C) ಅನೇಕಬಾರಿ (D) ಸಾಕಷ್ಟುಬಾರಿ

(3) ಎಷ್ಟು ಮಟ್ಟಿಗೆ ಉದ್ಧಾರ ತೆಗೆಯುದು ನಿಜ ? 1

(4) ಇತಿಹಾಸ ಯಾವುದಕ್ಕೆ ಸಾಕ್ಷಿಯಾಗಿದೆ ? 2

(5) ಕಾಲಕ್ಕೆ ತಕ್ಕ ಹಾಗೆ ಯಾರು ಯಾರಿಗೆ ಗೌರವ ಸಲ್ಲುತ್ತದೆ ? 2

(6) ಸ್ವಾಭಾವಿಕವಾಗಿ ಹೆಚ್ಚಾಗಿರುವುದು ಯಾವುದು ? 2

(7) ಮನುಷ್ಯ ಯಾವುದಕ್ಕಾಗಿ ಹಾತೊರೆಯುತ್ತಾನೆ ? 1

(8) ಸದ್ಗುಣಿ ಮಾನವೀಯತೇಯನ್ನು ಹೇಗೆ ಕಳೆದುಕೊಳ್ಳುತ್ತಾನೆ ? 2

(9) 'ಮಾನವೀತೆ' ಈ ಪದದ ವಿರುದ್ಧ ಪದ ಬರೆಯಿರಿ ? 1

13 ಕೊಟ್ಟಿರುವ ಪದ್ಯವನ್ನು ಓದಿ, ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿರಿ

ಭಾರತ ದೇವಿಯ ಭವ್ಯ ಕೀರುತಿ
ಕರ್ಣಾಟ ದೇವಿಯ ದಿವ್ಯ ಆರತಿ
ಭಾರತ ಮಾತೆಗೆ ಜಯವಾಗಲಿ - ಜಯವಾಗಲಿ
ಕರ್ಣಾಟ ಮಾತೆಗೆ ಜಯವಾಗಲಿ - ಜಯವಾಗಲಿ

ಗಂಥ ಕುಸುಮಗಳ ಹಿಮಾಚಲ
ರಾಗ ನಾದ ಕುಂಕುಮ ಸ್ವರಾಚಲ
ಮಾವು ಬೇವು ಫಲ ಬಲಾಬಲ
ಹಕ್ಕಿ ಸಂಕುಲದ ಜೀವಜಾಲ

- ಅರವಿಂದ ಮಹಾಗತ್ತಿ

ಪ್ರಶ್ನೆಗಳು :

(1) ಭಾರತದೇವಿಯ ಭವ್ಯ - 1

(A) ಆರತಿ (B) ಭಾರತಿ

(C) ಕೀರುತಿ (D) ಸಾರಥಿ

(2) ಭಾರತಮಾತೆಗೆ ಜಯವಾಗಲಿ. 1

ಮಾತೆ - ಇದಕ್ಕೆ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ

(3) ಮಾವು ಬೇವು ಫಲ ಬಲಾಬಲ 2

ಮಾವು ಬೇವು ಫಲಗಳ ರುಚಿ ವಿಶೇಷತೆಯನ್ನು ಬರೆಯಿರಿ

(4) ಹಕ್ಕಿ ಸಂಕುಲದ ಜೀವಜಾಲ. 2

ಮಧುರ ಧ್ವನಿಯನ್ನು ನೀಡುವ 4 ಹಕ್ಕಿಗಳ ಹೆಸರನ್ನು ಬರೆಯಿರಿ.

14 ಸಂತೆಯೊಳಗೆ ಮನೆಯನ್ನು ಮಾಡಿ ಯಾವುದಕ್ಕೆ ನಾಚಬಾರದು ? 1

15 ಶೋಲಿಗರು ಯಾರ ಮಕ್ಕಳು ? 1

16 ಸನಾತನ ಧರ್ಮ ಯಾವುದು ? 1

17 ಕನಕದಾಸರ ಅಂಕಿತ ನಾಮ ಯಾವುದು ? 1

18 (a) ಗಾಂಧಿಜಿಯವರಿಗೆ ಅಹಿಂಸೆಯ ಪಾಠ ಯಾರಿಂದ ದೊರೆಯಿತು ? 1

(b) ಅತ್ಯಂತ ಚಿನ್ಮಯ, ಇತ್ಯಾದಿ ಮನ್ವರತಕ - ಇಲ್ಲಿ ಗುಂಡಿಗೆ ಸೇರದ ಪದ ? 1

19 ಕೆಳಗಿನವುಗಳಿಗೆ ಉತ್ತರಿಸಿರಿ

(a) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ 2

(1) ಅಜಂತ

(2) ಸದುತ್ತರ

(3) ಅಬ್ದಿ

ಅಥವಾ

(a) ಇಲ್ಲಿರುವ ಯಾವುದಾದರು ಎರಡನ್ನು ಕೂಡಿಸಿ ಬರೆಯಿರಿ 2

(1) ಏಕ + ಏಕ

(2) ಜಲ + ಓಘ

(3) ಮಹಾ + ಔದಾರ್ಯ

(b) 'ವಂತ' ಪ್ರತ್ಯಯ ಸೇರಿಸಿ 2 ಶಬ್ದ ತಯಾರಿಸಿರಿ. 2

ಅಥವಾ

(b) 'ಇಂದ' ಪ್ರತ್ಯಮಕ್ಕೆ ಸಂಬಧಿಸಿ ಎರಡು ಶಬ್ದಗಳನ್ನು ಮಾಡಿರಿ.

(c) ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ವಿರುದ್ಧಪದ ಬರೆಯಿರಿ 2

(1) ವಿದ್ಯಾರ್ಥಿಗಳು ಬೆಳಗಿನ ಜಾವದಲ್ಲಿ ಏಳುವರು

(2) ಲೇಖಕರ ಪರಮ ಶತ್ರು ಗಡಿಯಾರ

ಅಥವಾ

(c) ಕೆಳಗೆ ಕೋಟ್ಟಿರುವ ಯಾವುದಾದರೂ ಎರಡಕ್ಕೆ ಜೋಡಿಪದ ಬರೆಯಿರಿ 2

(1) ಆಟ

(2) ತಿಂಡಿ

(3) ಕೂಲಿ

20 ಕೆಳಗೆ ಕೊಟ್ಟಿರುವ ದ್ವಿರುಕ್ತಿಗಳಲ್ಲಿ ಯಾವುದಾದರೂ ಎರಡನ್ನು ನೀಮ್ಮ ವಾಕ್ಯಗಳಲ್ಲಿ ಪ್ರಯೋಗಿಸಿರಿ. 2

(1) ತುತ್ತತುದಿ

(2) ಕಟ್ಟಕಡೆ

(3) ಮೊಟ್ಟಮೊದಲು

21 'ಅರಮನೆ' ಈ ಪದವು ಯಾವ ಸಮಾಸದ ನಿಯಮದಲ್ಲಿ ಬರುತ್ತದೆ ? 1

22 ದುಡಿಯುವ ಎತ್ತುಗಳ ಮಹತ್ವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ 4

23 ಪಂಪ ಮನುಷ್ಯರ ಉತ್ತಮ ಗುಣಗಳನ್ನು ಹೇಗೆ ನಿರುಸಿಸಿದ್ದಾನೆ ? 5

24 ಕುವೆಂಪು ಅವರು ಭಾರತ ಮಾತೆಯನ್ನು ಹೇಗೆ ವರ್ಣಿಸಿದ್ದಾರೆ ? 5

ಅಥವಾ

ಕ್ಷೌರಿಕನ ಪಾತ್ರವನ್ನು ವಿವರಿಸಿರಿ 5

25 ಕೊಟ್ಟಿರುವ ಪದಗಳಲ್ಲಿ ಯಾವುದಾದರೂ ಎರಡಕ್ಕೆ ಎರಡು ಶಬ್ದಗಳನ್ನು ಬಳಿಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ವಾಕ್ಯಗಳಲ್ಲಿ ಬರೆಯಿರಿ. 2+2=4

(a) ಬಾಷೆ/ಭಾಷೆ

(b) ಪ್ರದಾನ/ಪ್ರಧಾನ

(c) ಭಾನು/ಬಾನು

26 ಜಿ. ಎನ್. ಎಸ್. ವಿದ್ಯಾಸಂಸ್ಥೆಯಲ್ಲಿನ ಪ್ರವೇಶ ದಾಖಲಾತಿಯನ್ನು ಕೆಳಗೆ ಕೊಟ್ಟಿರುವ ಅಂಕಿ-ಅಂಶಗಳ ಸಹಾಯದಿಂದ ಸರಳ ಸ್ತಂಭ (ದಂಡ) ಚಿತ್ರವನ್ನು ರಚಿಸಿರಿ. 5

| ವರ್ಷ | 1991 | 1992 | 1993 | 1994 | 1995 | 1996 | 1997 | 1998 | 1999 | 2000 |
|---|---|---|---|---|---|---|---|---|---|---|
| ಪ್ರವೇಶ ದಾಖಲಾತಿ | 6 | 8 | 2 | 5 | 14 | 2 | 5 | 7 | 9 | 20 |

ಅಥವಾ

ನೀವು ರಾಜು ಹಾವೇರಿಯವರು, ನಿಮ್ಮ ಸ್ನೇಹಿತ ರತ್ನಾಕರ, ಅಲ್ಮಟ್ಟಿ, ಬೀಜಾಪುರ ಜಿಲ್ಲೆ ಇವರಿಗೆ 400 ರೂಪಾಯಿಗಳನ್ನು ಕಳುಹಿಸಲು ಮನಿಆರ್ಡರ್ ಅರ್ಜಿ ಭರ್ತಿ ಮಾಡಿರಿ.

ಅವರಿಗೆ,

ಅಂಚೆಮನುಷ್ಯ

ಅಂಚೆ ಕಛೇರಿ .............

ಪಿನ್‌ಕೋಡ್ ..............

ಭಾರತದ ಮನಿಆರ್ಡರ್

ಸಂದಾಯಿಸಿದ ಹಣ (ಅಕ್ಷರಗಳಲ್ಲಿ) ................

ರೂಪಾಯಿಗಳು (ಸಂಖ್ಯೆಯಲ್ಲಿ) .................

ಅವರಿಗೆ

........................

........................

........................ ಪಿನ್‌ಕೋಡ್ ........................

ದೀನಾಂಕ : ........................ ಕಳುಹಿಸುವವರ ಸಹಿ

ಎಂ. ಓ. ನಂ. ........................ ಅಂಚೆ ಇಲಾಖಾ ಗುರುತಿನ ಪತ್ರ

ದಿನಾಂಕ : ........................

ಸಂದಾಯಿಸಿದ ಅಂಚೆ ಹೆಸರು

........................

(ಹಣಕಳುಹಿಸುವವರ ಪೂರ್ಣವಿಳಾಸ)

........................

........................

ಪಿನ್‌ಕೋಡ್ ........................

ಸಂಪರ್ಕಕ್ಕಾಗಿ

................................................

................................................

................................................

ನಿಮ್ಮ ಪ್ರೀತಿಯ

........................

27 ಶಾಲುಸಾಬಿಯ ಪಾತ್ರವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ 5

28 ಈ ವಾಕ್ಯಗಳನ್ನು ಓದಿ, ನಿರ್ದೇಶನದಂತೆ - ಉತ್ತರಿಸಿರಿ. 1×5=5

(1) ಯೇಸುಕ್ರಿಸ್ತನು ಪಾಪ ಪರಹರಕ್ಕಾಗಿ ಪ್ರಾಣಕೊಟ್ಟನು (ಶುದ್ಧರೂಪದಲ್ಲಿ ಬರೆಯಿರಿ)

(2) ರಾಮನು ರಾವಣನನ್ನು ಕೊಂದನು: ರಾಮನು ಇದರ ವಚನರೂಪ .............

(3) ಊರೂರು : ದ್ವಿರುಕ್ತಿ :: ಊರು-ಕೇರಿ :

(4) ಗಿರೀಶನು ಶಾಲೆಗೆ ಏಕೆ ಹೋದನು ತಿಳಿಸಿರಿ

(ಇಲ್ಲಿ ಇರಬೇಕಾದ ಲೇಖನ ಚಿನ್ಹೆ)

(5) ಕುವೆಂಪು ಅವರು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದರು.

(ಇದನ್ನು ಭವಿಷತ್ ಕಾಲಕ್ಕೆ ಪರಿವರ್ತಿಸಿರಿ)

29 ನೀವು ಮಹೇಶ್ವರಿ/ರಾಮಾನುಜ ಕುವೆಂಪುನಗರ, ಮೈಸೂರು, ಎಂದು ಭಾವಿಸಿ ಅಭಿಯಂತರರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮೈಸೂರು ಇವರಿಗೆ ರಸ್ತೆ ದೀಪಗಳನ್ನು ಸರಿಪಡಿಸಲು ಕೋರಿ ಒಂದು ಪತ್ರ ಬರೇಯಿರಿ 7

ಅಥವಾ

ಭಾಗಲಕೋಟೇಯಲ್ಲಿರುವ ಆದರ್ಶ ವಸತಿ ಶಾಲೆಯೊಂದರಲ್ಲಿ 11 ನೇ ತರಗತಿಯಲ್ಲಿ ವ್ಯಾಸಾಂಗ ಮಾಡುತ್ತಿರುವ ನಯನಕುಮಾರ/ರಂಜಿತಾ ಎಂದು ಭಾವಿಸಿಕೊಂಡು ರಾಜಾಜಿನಗರ ಬೇಂಗಳೂರನಲ್ಲಿರುವ ನಿಮ್ಮ ತಾಯಿಯವರಿಗೆ ಗಣರಾಜ್ಯೋತ್ಸವಕ್ಕೆ ಆಮಂತ್ರಿಸುತ್ತಾ ಒಂದು ಪತ್ರ ಬರೆಯಿರಿ.

30 ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು 50 ಶಬ್ದಗಳಿಗೆ ಮೀರದಂತೆ - ವಿಸ್ತರಿಸಿ ಬರೆಯಿರಿ. 5

(1) ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.

(2) ಅರಮನೆಗಿಂತ ನೆರೆಮನೆ ಲೇಸು.

(3) ಕಬ್ಬು ಡೊಂಕಾದರೆ ಸಿಹಿ ಡೊಂಕೆ ?

31 ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 200 ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ. 10

(1) ಸಂಪರ್ಕ ಮಾಧ್ಯಮಗಳು

(2) ಔಷಧೀಯ ಸಸ್ಯಗಳು

(3) ನನ್ನ ಮೆಚ್ಚಿನ ಆಟ